# ಮಾಂತ್ರಿಕ ಕೊಳ

■ ವೀಣಾ ಶಂಕರ್, ಬೆಂಗಳೂರು

ಕಾಡಿನಲ್ಲಿ ಒಂದು ಕೊಳವಿತ್ತು. ಅದು ವಿಚಿತ್ರ ಮಾಂತ್ರಿಕ ಶಕ್ತಿಯನ್ನು ಹೊಂದಿತ್ತು. ಕೊಳದಲ್ಲಿ ಬೀಳುವ ಯಾವುದೇ ಪ್ರಾಣಿ ಮನುಷ್ಯ ರೂಪತಾಳುತ್ತಿತ್ತು. ಅದೇ ಕೊಳದಲ್ಲಿ ಯಾವುದೇ ಪ್ರಾಣಿ ಎರಡನೇ ಬಾರಿ ಬಿದ್ದರೆ ಅದು ತನ್ನ ಮೂಲ ರೂಪಕ್ಕೆ ಮರಳುತ್ತಿತ್ತು. ಒಂದು ಬೇಸಿಗೆಯ ಮಧ್ಯಾಹ್ನ ಎರಡು ಕೋತಿಗಳು ಕೊಳದ ಬಳಿಯ ಮರದ ಮೇಲೆ ಆಡುತ್ತಿದ್ದವು. ಅವು ಜಾರಿ ಮಾಯಾ ಕೊಳಕ್ಕೆ ಬಿದ್ದವು. ಹೊರಗೆ ಬಂದಾಗ ಒಂದು ಕೋತಿ ಸುಂದರ ಹುಡುಗಿಯ ರೂಪ ಪಡೆಯಿತು. ಇನ್ನೊಂದು ಕೋತಿ ಸಾಮಾನ್ಯ ಮನುಷ್ಯನಂತಾಯಿತು. ಸುಂದರ ಹುಡುಗಿಯಾಗಿ ಬದಲಾದ ಕೋತಿ ದೇವರಿಗೆ ನಮಸ್ಕರಿಸಿ 'ಓ ದೇವರೇ! ಮತ್ತೊಂದು ಜೀವನ ನಾನು ಊಹಿಸಿರುವುದಕ್ಕಿಂತ ಅದ್ಭುತವಾಗಿ ನೀಡಿದ್ದಕ್ಕೆ ಧನ್ಯವಾದಗಳು' ಎಂದಿತು. ಆದರೆ, ಸಾಮಾನ್ಯ ಮಾನವ ರೂಪ ಪಡೆದಿದ್ದ ಕೋತಿ ಅಷ್ಟಕ್ಕೆ ತೃಪ್ತನಾಗದೆ 'ತಾನು ಕೊಳದಲ್ಲಿ ಮತ್ತೊಮ್ಮೆ ಮುಳುಗಿ ಏಳುತ್ತೇನೆ ಏನಾಗುತ್ತದೆ ನೋಡೋಣ' ಎಂದು ಹೇಳಿತು.

ಆಗ ಹುಡುಗಿಯಾಗಿದ್ದ ಕೋತಿ 'ನಿನ್ನದು ಯಾವುದು ಅಲ್ಲವೋ ಅದನ್ನು ಹುಡುಕಲು ಹೋಗಬೇಡ. ನಿನಗಿರುವುದರಲ್ಲಿ ಸಮಾಧಾನವಾಗಿರು' ಎಂದು ಹೇಳಿದಳು. ಆದರೆ, ಅವನು ಕೊಳಕ್ಕೆ ಹಾರಿದನು ಮತ್ತು ಕೋತಿಯಾಗಿ ಬದಲಾದನು. 'ಓಹ್... ಎಂತಹ ದುರಂತ, ಮತ್ತೆ ಪ್ರಯತ್ನಿಸುತ್ತೇನೆ' ಎಂದು ಹೇಳಿ ಮತ್ತೆ ಮತ್ತೆ ಕೊಳಕ್ಕೆ ಹಾರಿ ಎದ್ದಿತು. ಆದರೆ, ಏನೂ ಆಗಲಿಲ್ಲ. ಅವನು ಕೋತಿಯಾಗಿಯೇ ಉಳಿದನು. ಅಲ್ಲೇ ದಡದಲ್ಲಿ ಕುಳಿತಿದ್ದ ಸರ್ಕಸ್ ನಡೆಸುವ ವ್ಯಕ್ತಿ ಕೋತಿ ಪದೇಪದೇ ನೀರಿಗೆ ಧುಮುಕುತ್ತಿರುವುದನ್ನು ನೋಡಿ ಈ ಕೋತಿ ಒಳ್ಳೇ ಚಮತ್ಕಾರ ಮಾಡುತ್ತದೆ. ಸರ್ಕಸ್ಸಿಗೆ ತೆಗೆದುಕೊಂಡು ಹೋಗೋಣ ಎಂದು ಕೋತಿಯನ್ನು ಹಿಡಿದು ಪೇಟೆಗೆ ತೆಗೆದುಕೊಂಡು ಹೋದನು. ನಂತರ ಅದನ್ನು ಆಡಿಸುವ ಕಾರ್ಯಕ್ರಮ ನಡೆಸುತ್ತಿದ್ದನು. ಕೋತಿ ತನ್ನ ಜೀವನವನ್ನು ಸರ್ಕಸ್ಸಿನಲ್ಲೇ ಕಳೆಯಿತು.ಆದರೆ, ಸುಂದರ ಹುಡುಗಿಯಾದ ಕೋತಿ ಸುಂದರ ರಾಜಕುಮಾರನನ್ನು ಮದುವೆಯಾಗಿ ಐಷಾರಾಮ ಜೀವನವನ್ನು ನಡೆಸುತ್ತಾ ಇದ್ದಳು. ■

# ಕಿಲಾಡಿ ನಾಯಿ

■ ಅರವಿಂದ ಜಿ. ಜೋಷಿ

ಕಲೆ: ಸಂತೋಷ್ ಸಸಿಹಿತ್ಲು

ಒಂದು ಊರಲ್ಲಿ ತುಂಬಾ ತಿಳಿವಳಿಕೆಯುಳ್ಳ ದಷ್ಟಪುಷ್ಟ ನಾಯಿ ಇತ್ತು. ಆ ನಾಯಿ ತುಂಬಾ ಕಿಲಾಡಿ ಕೂಡ ಆಗಿತ್ತು. ಒಂದು ದಿನ ಅದು ಅಲ್ಲಿ ಇಲ್ಲಿ ತಿರುಗಾಡುತ್ತ ಹತ್ತಿರದ ಅಡವಿಯ ಮಧ್ಯದೊಳಗೆ ಬಂದು ಸೇರಿತು. ಅಷ್ಟರಲ್ಲಿ ಅದಕ್ಕೆ ದೂರದಿಂದ ಒಂದು ದೊಡ್ಡ ಹುಲಿ ಬರುವುದು ಕಂಡಿತು. ಮೊದಮೊದಲು ಅದು ಭಯಪಟ್ಟು ಗಾಬರಿಗೊಂಡು ಅಲ್ಲಿಂದ ಓಡಿ ಹೋಗಲು ಯೋಚಿಸಿತು.

ಆದರೆ ಮರುಕ್ಷಣವೇ ಮನದಲ್ಲಿ 'ಛೇ... ನಾನೇನಾದರೂ ಇಲ್ಲಿಂದ ಓಡಲು ಮುಂದಾದರೆ, ಈ ಹುಲಿ ನನ್ನನ್ನು ಬೆನ್ನಟ್ಟಿ ಬಂದು ಹಿಡಿದು ತಿನ್ನುವುದು ಗ್ಯಾರಂಟಿ' ಎಂದು ಅಂದುಕೊಳ್ಳುತ್ತಿದ್ದಾಗ ಅದು ತನ್ನ ಬಲಭಾಗದ ಮರದ ಕೆಳಗೆ ಒಂದಿಷ್ಟು ಮೂಳೆಗಳಿರುವುದು ಕಂಡಿತು. ತಡಮಾಡದೇ ಆ ನಾಯಿ ಅತ್ತ ಹೋಗಿ ಅವುಗಳನ್ನು ಒಟ್ಟು ಮಾಡಿತು. ಆನಂತರ ಎಡಕ್ಕೆ ತಿರುಗಿದಾಗ ಅಲ್ಲೊಂದು ಮರದ ಬೊಡ್ಡೆಯಿಂದ ರಕ್ತ ವರ್ಣದ ರಸ ತೊಟ್ಟಿಕ್ಕುತ್ತಿರುವುದು ಕಂಡು ಅದರ ಬಳಿ ಹೋಗಿ ಅದನ್ನು ನೆಕ್ಕಿದಂತೆ ಮಾಡಿತು. ಆಗ ಅದರ ಮೂತಿಯ ಸುತ್ತ ರಕ್ತ ಅಂಟಿಕೊಂಡಂತೆ ಕಾಣತೊಡಗಿತು. ಈಗ ಮೂಳೆಯ ಬಳಿ ಬಂದ ನಾಯಿ ಆ ಹುಲಿಗೆ ಕೇಳುವ ರೀತಿ ಜೋರಾಗಿ 'ಅಪ್ಪಾ... ಭಗವಂತಾ ನನಗೆ ತುಂಬಾ ಹಸಿವೆ ಆಗಿತ್ತು. ಆದರೆ ನೀನು ಯಾವುದೋ ಪುಟ್ಟ ಪ್ರಾಣಿ ಕಳುಹಿಸಿಕೊಟ್ಟೆ. ಅದರಿಂದ ನನ್ನ ಹಸಿವು ತಣಿದಿಲ್ಲ... ಏನು ಮಾಡಲಿ ಹೇಳು' ಎಂದು ಕೂಗಿ ಮತ್ತೆರಡು ನಿಮಿಷದ ನಂತರ 'ಹಾಂ... ಏನಂದೀ ಭಗವಂತಾ, ನನಗಾಗಿ ಹುಲಿ ಕಳುಹಿಸಿದ್ದಿಯಾ ತುಂಬಾ ಥ್ಯಾಂಕ್ಸ್' ಎಂದು ಒಮ್ಮೆ ಹುಲಿ ಅದನ್ನು ದಿಟ್ಟಿಸಿ ನೋಡಿ ಇಡೀ ಕಾನನವೇ ನಡುಗುವಂತೆ ಜೋರಾಗಿ 'ಬೌ... ಬೌ' ಎಂದು ಬೊಗಳಿತು.

ಆ ನಾಯಿಯ ವಿಕಾರವಾದ ಆಕಾರ, ಅದರ ವರ್ತನೆ ಧ್ವನಿಯನ್ನು ಈ ಹಿಂದೆ ಎಂದೂ ಕಾಣದ, ಕೇಳದ ಹುಲಿ ಸದ್ಯ ತನ್ನ ಜೀವ ಉಳಿದರೆ ಸಾಕು ಎನ್ನುತ್ತ ಅಲ್ಲಿಂದ ಓಡಿ ದೂರದ ಮರದ ಮೇಲೆ ಕುಳಿತ ತನ್ನ ಮಿತ್ರ ಮಂಗಣ್ಣನನ್ನು ಕರೆಯಿತು. ಮರದ ಮೇಲಿದ್ದ ಮಂಗಣ್ಣ ಕೆಳಗೆ ಬಂದಿತು. ನಂತರ ಹುಲಿ ಅದಕ್ಕೆ ನಡೆದ ವಿಚಾರ ಹೇಳಿತು. ಆಗ ಮಂಗಣ್ಣ 'ಅಯ್ಯೋ ಮಿತ್ರಾ ನೀನು ತಿಳಿದಂತೆ ಅದೇನು ನಿನಗಿಂತ ಕ್ರೂರ, ಬಲಾಢ್ಯ ಪ್ರಾಣಿ ಅಲ್ಲ. ಅದು ಯಕಶ್ಚಿತ್ ಒಂದು ನಾಯಿ ಅಷ್ಟೇ, ಅದು ಆ ರೀತಿ ಬೆಳೆದಿದೆ, ನೋಡು. ನಾವಿಬ್ಬರೂ ಸೇರಿ ಅದಕ್ಕೊಂದು ತಕ್ಕ ಪಾಠ ಕಲಿಸೋಣ ಬಾ' ಎನ್ನುತ್ತ ಆ ಮಂಗ ಛಂಗನೆ ಹಾರಿ ಹುಲಿಯ ಬೆನ್ನಿನ ಮೇಲೆ ಕುಳಿತುಕೊಂಡಿತು. ಅನತಿ ದೂರದಲ್ಲಿ ಹುಲಿ ಮತ್ತು ಮಂಗ ಬರುತ್ತಿರುವುದನ್ನು ಕಂಡ ನಾಯಿ ತನ್ನಷ್ಟಕ್ಕೆ ತಾನು ಜೋರಾಗಿ 'ಛೇ ಎಷ್ಟೊತ್ತಾಯ್ತು ಆ ಮಂಗಣ್ಣ ಹೋಗಿ, ಹಾಂ ತಾನು ಬರುವಾಗ ಒಂದು ದೊಡ್ಡ ಹುಲಿ ತಿನ್ನಲು ತರುವೆ ಎಂದು ಹೇಳಿ ಹೋಗಿ. ಬರ್ಲಿ ಅದು, ಮಾಡುವೆ ಅದಕ್ಕೆ ಹಬ್ಬ' ಎಂದು ಕೂಗಿಕೊಂಡಾಗ ಹುಲಿ ಮಂಗಣ್ಣನನ್ನು ಕೆಳಗೆ ಬೀಳಿಸಿ. ಓ.. ಹೀಗೋ ಸಮಾಚಾರ? ನೀನೂ ಅದರೊಂದಿಗೆ ಶಾಮೀಲಾಗಿದ್ದೀಯಾ' ಎಂದಾಗ ಮಂಗಣ್ಣನಿಗೆ ಗಾಬರಿಯಾಯ್ತು. ಅತ್ತ ದಷ್ಟಪುಷ್ಟ ನಾಯಿ, ಇತ್ತ ದೊಡ್ಡ ಹುಲಿ. ಇವರಿಬ್ಬರ ಕೈಗೆ ಸಿಕ್ಕರೆ ನನಗಂತೂ ಉಳಿಗಾಲವಿಲ್ಲ ಅಂದುಕೊಳ್ಳುತ್ತ ಲಗುಬಗೆಯಿಂದ ಅದು ಪಕ್ಕದಲ್ಲಿದ್ದ ಮರ ಏರಿ ಹೊರಟು ಹೋಯಿತು. ಮಂಗ ಹೋದ ಬಳಿಕ ಹುಲಿ ಭಯದಿಂದ ಕಾಡಿನೊಳಗೆ ಓಡಿಹೋಯಿತು. ಅವೆರಡೂ ಓಡಿ ಹೋಗುವುದನ್ನು ಕಂಡ ಈ ನಾಯಿ ತನ್ನ ಯೋಜನೆ ಫಲಿಸಿತೆಂದು ಹರುಷದಿಂದ ಕಾಡಿನಿಂದ ನಾಡಿಗೆ ಓಡಿ ಬಂದಿತು. ■

